# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2008

॥ ಧಿಯೋ ಯೋನಃ ಪ್ರಚೋದಯಾತ್ ॥



ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 94484 37893



Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-8 ಸಂಚಿಕೆ-10 ಪುಟಗಳು-6 Registered Under No.KA/SK/UDP/1260/2006-2008 Dated from 01-01-2006 to 31-12-2008.






## ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನವರಾತ್ರಿ ಉತ್ಸವದ ಸಂಭ್ರಮ

ನವರಾತ್ರಿ ಮಹೋತ್ಸವವು ಅನಾದಿ ಕಾಲದಿಂದಲೂ ಆಚರಿಸಿಕೊಂಡು ಬಂದಿರುವ ಧಾರ್ಮಿಕ ವಿಧಿ. ಪುರಾಣ ಕಥೆಗಳಲ್ಲಿಯೂ ನವರಾತ್ರಿ ಧಾರ್ಮಿಕ ವಿಧಿಗಳನ್ನು ವಿಜೃಂಭಣೆಯಿಂದ ನಡೆಸಿಕೊಂಡು ಬಂದಿರುವ ನಿದರ್ಶನಗಳಿವೆ. ರಾಜಮಹಾರಾಜರು ಇದನ್ನು ವಿಜಯೋತ್ಸವ ಎಂಬಂತೆ ಆಚರಿಸುತ್ತಿದ್ದರು. ಮೈಸೂರಿನಲ್ಲಿ ನಡೆಯುವ ದಸರಾ ಮಹೋತ್ಸವ ವಿಶ್ವವಿಖ್ಯಾತವಾಗಿದ್ದು ಪ್ರಪಂಚದ ಮೂಲೆಮೂಲೆಗಳಿಂದ ಲಕ್ಷಾಂತರ ಆಸ್ತಿಕ ಬಾಂಧವರನ್ನು ಆಕರ್ಷಿಸುತ್ತಿರುವುದು ಅದರ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ನವರಾತ್ರಿ ಉತ್ಸವವು ಹಿಂದು ಸಮಾಜದ ಎಲ್ಲಾ ವರ್ಗದ ಜನರಿಂದ ಆಚರಿಸಲ್ಪಡುವ ಪ್ರಮುಖ ಧಾರ್ಮಿಕ ಹಬ್ಬವಾಗಿದೆ.

ಶಕ್ತಿ ಸ್ವರೂಪಿಣಿಯಾದ ಜಗನ್ಮಾತೆಯನ್ನು ನವರಾತ್ರಿಯ ಒಂಭತ್ತೂ ದಿನಗಳಲ್ಲಿ ಆರಾಧಿಸಲಾಗುತ್ತದೆ. ಲೋಕಕಂಟಕರಾದ ಅಸುರರನ್ನು ಮಥಿಸಿ ಶಿಷ್ಟರನ್ನು ಪರಿಪಾಲಿಸಿದ ದೇವಿಯ ಶಕ್ತಿ ಪರಾಕ್ರಮಗಳನ್ನು ಈ ದಿನಗಳಲ್ಲಿ ಸ್ತುತಿಸಲಾಗುತ್ತದೆ. ದೇವದೇವತೆಗಳಲ್ಲಿ ಬಹಳ ಬೇಗನೆ ಒಲಿದು ಭಕ್ತರ ಅಭೀಷ್ಟಗಳನ್ನು ಈಡೇರಿಸುವ ದೇವತೆ ಜಗನಾತೆ. ಯಾವ ರೀತಿಯಲ್ಲಿ ಮಗುವು "ಅಮ್ಮಾ" ಎಂದು ಕೂಗಿದಾಗ ಓಡೋಡಿ ಬಂದು ಕಂದನನ್ನು ಸಂತೈಸುತ್ತಾಳೆಯೋ ಅದೇ ರೀತಿ ಆದಿಶಕ್ತಿರೂಪಿಣಿಯಾದ ಜಗನ್ಮಾತೆ ಭಕ್ತರ ಭಕ್ತಿಪೂರ್ವಕ ಕರೆಗೆ ಓಗೊಟ್ಟು ಕ್ಷಿಪ್ರ ವರಪ್ರಸಾದಗಳನ್ನು ನೀಡುವ ತಾಯಿಯಾಗಿದ್ದಾಳೆ.

ಸಾಮಾನ್ಯವಾಗಿ ಎಲ್ಲಾ ಸ್ಥಾನಿಕ ದ್ರಾವಿಡ ಬ್ರಾಹ್ಮಣರ ಕುಟುಂಬಗಳಲ್ಲಿಯೂ ಹಿರಿಯರ ಮನೆಯಲ್ಲಿ ದೇವಿಯ ಆರಾಧನೆ ನಡೆಯುತ್ತಿರುವುದು ಕಾಣುತ್ತದೆ. ನವರಾತ್ರಿ ಕಳೆದು ಬರುವ ವಿಜಯದಶಮಿಯಂದು ಸಮಗ್ರ ಸಮಾಜದ ಏಳಿಗೆಗಾಗಿ ಚಂಡಿಕಾಹೋಮವನ್ನು ನಡೆಸಿಕೊಂಡು ಬರುವ ಉದ್ದೇಶದಿಂದ ಸ್ಥಾಪನೆ ಯಾಗಿರುವ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಚಂಡಿಕಾಹೋಮವನ್ನು ವಿಧಿವತ್ತಾಗಿ ಆಚರಿಸಿಕೊಂಡು ಬರುತ್ತಿದೆ. ಶ್ರೀ ಶಾರದಾ ಮಂದಿರದ ಆವರಣದಲ್ಲಿ ಶ್ರೀ ಶಾರದಾ ದೇವಸ್ಥಾನ ಅಸ್ತಿತ್ವಕ್ಕೆ ಬಂದಂದಿನಿಂದ ನವರಾತ್ರಿ ಉತ್ಸವವು ಆಚರಿಸಲ್ಪ ಡುತ್ತಿದೆ.

ಹಲವಾರು ವರ್ಷಗಳಿಂದ ನಡೆದು ಕೊಂಡು ಬಂದಿರುವಂತೆ ಈ ವರ್ಷವೂ ಶ್ರೀ ಶಾರದಾ ದೇವಸ್ಥಾನದಲ್ಲಿ ನವರಾತ್ರಿ ಉತ್ಸವವು ತಾ.30-09-2008ರಿಂದ 08-10-2008ರ ತನಕ ಸಕಲ ಧಾರ್ಮಿಕ ವಿಧಿಯೊಂದಿಗೆ ನಡೆಸಲ್ಪ ಟ್ಟಿತು. ಪ್ರತಿದಿನ ಮಧ್ಯಾಹ್ನ ಮತ್ತು ರಾತ್ರಿ ವಿಶೇಷ ಪೂಜೆ ನಡೆಯುತ್ತಿತ್ತು. ಪ್ರತಿದಿನ ದೇವಸ್ಥಾನ ವೇದಿಕೆ ಮತ್ತು ಮಹಿಳಾ ವೇದಿಕೆಯ ಸದಸ್ಯರು ಮತ್ತು ಸಾರ್ವಜನಿಕರು ದೇವಿಯ ಸ್ತೋತ್ರಗಳನ್ನು ಪಠಿಸಿ, ದೇವಿಯ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಸಾಯಂಕಾಲ 5-30ಕ್ಕೆ ಆರಂಭವಾದ ಈ ಕಾರ್ಯಕ್ರಮ ರಾತ್ರಿ 7-00 ಗಂಟೆಯವರೆಗೂ ನಿರಂತರವಾಗಿ ನಡೆಯುತ್ತಿತ್ತು. ಶ್ರುತಿ, ಲಯಬದ್ಧವಾಗಿ ಹಾಡುತ್ತಿದ್ದ ಶ್ಲೋಕ ಮತ್ತು ಭಜನೆ ಆಸ್ತಿಕರಲ್ಲಿ ಭಕ್ತಿಯನ್ನು ಉಕ್ಕಿಹರಿಸುವಂತಿತ್ತು. ದೇವಸ್ಥಾನದ ಪರಿಸರದಲ್ಲಿ ದೇವಸಾನ್ನಿಧ್ಯದ ಅರಿವು ಉಂಟಾಗುತ್ತಿತ್ತು. ಶಾರದಾ ಮಂಟಪದ ಪರಿಸರವೆಲ್ಲವೂ ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಿತ್ತು. ಪರಿಸರದ ಎಲ್ಲಾ ವರ್ಗದ ಜನರು ಈ ಕಾರ್ಯಕ್ರಮದಲ್ಲಿ ಭಕ್ತಿಪರವಶತೆಯಿಂದ ಭಾಗವಹಿಸುತ್ತಿದ್ದರು. ಬೆಳ್ಳಿಯ ಪ್ರಭಾವಳಿಯ ಮಧ್ಯೆ ರಜತಪೀಠದ ಮೇಲೆ ಚಿನ್ನಾಭರಣಗಳಿಂದ ಅಲಂಕೃತಳಾದ ಶಾರದಾಮಾತೆ ಮಂದಸ್ಮಿತಳಾಗಿ ಭಕ್ತಾದಿಗಳಿಗೆ ಅಭಯಪ್ರದಾನ ಮಾಡುವಂತೆ ವಿರಾಜಮಾನಳಾಗಿದ್ದಳು.

ದಿನಂಪ್ರತಿ ರಾತ್ರಿ ಪೂಜೆಯ ನಂತರ ಧಾನ್ಯಗಳಿಂದ ವಿಧಿವತ್ತಾಗಿ ಸಿದ್ಧಪಡಿಸಿದ ವಿಶೇಷ ಪ್ರಸಾದವನ್ನು ಎಲ್ಲಾ ಭಕ್ತಾಭಿಮಾನಿಗಳಿಗೆ ವಿತರಿಸಲಾಗುತ್ತಿತ್ತು. ದೇವಸ್ಥಾನ ವೇದಿಕೆಯ ಶ್ರೀ ಬಿ. ವಾಸುದೇವರಾಯರು, ಉಷಾ ಮೋಹನ್‌ದೇವ್ ಮತ್ತು ಮಹಿಳಾ ವೇದಿಕೆಯ ಗೀತಾಕೃಷ್ಣಕುಮಾರ್ ಮಟ್ಟು, ಮಹಾಲಕ್ಷ್ಮಿ ಶ್ಯಾನುಭಾಗ್ ಅಂಬಲ್ಪಾಡಿ, ಭುವನೇಶ್ವರಿ ಎನ್.ಐ.ಪಿ. ಮತ್ತು ಎಲ್ಲಾ ಸದಸ್ಯರು ನವರಾತ್ರಿ ಉತ್ಸವವನ್ನು ನಡೆಸಲು ಸಿದ್ಧತೆಗಳನ್ನು

(3ನೇ ಪುಟಕ್ಕೆ ...)

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)-ವಾರ್ಷಿಕ ಮಹಾಸಭೆ

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 2007-08ನೇ ಸಾಲಿನ ಸರ್ವಸದಸ್ಯರ ಸಭೆಯು ತಾ.28-09-2008 ರವಿವಾರ ಬೆಳಿಗ್ಗೆ ಸೊಸೈಟಿಯ ಕಚೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಿತು. ಸೊಸೈಟಿಯ ಅಧ್ಯಕ್ಷರಾದ ಮಾರ್ಪಳ್ಳಿ ಸದಾನಂದರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಕು। ದೀಕ್ಷಾರವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು ಸತತವಾಗಿ 5ನೇ ವರ್ಷದಲ್ಲಿ ಲಾಭಗಳಿಸುತ್ತಾ ಹಾಗೂ ಲಾಭವನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿರುವ ಸಂಸ್ಥೆ ಮುಂದಿನ ವರ್ಷದಲ್ಲೂ ಲಾಭಗಳಿಸುವ ಹಾದಿಯಲ್ಲಿ ಮುನ್ನಡೆದಿದೆ. ಸೊಸೈಟಿಯ ಕಾರ್ಯನಿರತ ಬಂಡವಾಳವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯಬಾಂಧವರು ಪಾಲುಬಂಡವಾಳ ಹಾಗೂ ಠೇವಣಿಗಳಲ್ಲಿ ಹಣ ತೊಡಗಿಸಿ ಸಹಕರಿಸಬೇಕು ಎಂದರು. ಸೊಸೈಟಿಯ ಪ್ರಥಮ ಶಾಖೆಯನ್ನು ಕುಕ್ಕಿಕಟ್ಟೆಯಲ್ಲಿ ಆರಂಭಿಸುವರೆ ಸಹಕಾರ ಇಲಾಖೆಯಿಂದ ಅನುಮತಿಗಾಗಿ ಪತ್ರ ವ್ಯವಹಾರ ನಡೆಸಿದ್ದು ಅನುಮತಿ ಸಿಕ್ಕಿದ ಕೂಡಲೇ ಶಾಖೆಯನ್ನು ಆರಂಭಿಸುವ ಯೋಜನೆ ಇದೆ ಎಂದರು.

ಪ್ರಸಕ್ತ ಸುಮಾರು 1.56 ಕೋಟಿ ಕಾರ್ಯನಿರತ ಬಂಡವಾಳ ಹೊಂದಿರುವ ಸಂಸ್ಥೆ 2007-08ನೇ ಸಾಲಿನಲ್ಲಿ 2.59 ಲಕ್ಷ ರೂ. ನಿವ್ವಳ ಲಾಭಗಳಿಸಿದ್ದು ಹಿಂದಿನ ವರ್ಷಕ್ಕಿಂತ ಶೇಕಡಾ 9.92ರ ಬೆಳವಣಿಗೆ ಸಾಧಿಸಿದೆ. ವರ್ಷ 2003-04ರಿಂದ ಸತತವಾಗಿ ನಿವ್ವಳ ಲಾಭಗಳಿಸಿರುವ ಸಂಸ್ಥೆ 2008-09ನೇ ಸಾಲಿನಲ್ಲಿಯೂ ನಿವ್ವಳ ಲಾಭಗಳಿಸುವ ಸುಸ್ಥಿತಿಯಲ್ಲಿದೆ ಎಂದು ಹೇಳಿದ ಅವರು ಈ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸಿದ ಸದಸ್ಯಬಾಂಧವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಿದರು.

ಅಧ್ಯಕ್ಷರು ಮಂಡಿಸಿದ 2007-08ನೇ ಸಾಲಿನ ವಾರ್ಷಿಕ ವರದಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಂತರ 2007-08ನೇ ಸಾಲಿನ ಅಪರಿಶೋಧಿತ ಲಾಭ-ನಷ್ಟದ ತಃಖ್ತೆ ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಕಾರ್ಯದರ್ಶಿ ಕೆ. ವೇಣುಗೋಪಾಲರಾವ್ ರವರು ಸಭೆಯ ಮುಂದಿಟ್ಟರು. ತಃಖ್ತೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಸಭೆಯು ಹಲವು ವಿಷಯಗಳಿಗೆ ಸಮಾಧಾನಕರ ವಿವರಣೆಗಳನ್ನು ಪಡೆದು ತನ್ನ ಅಂಗೀಕಾರವನ್ನು ನೀಡಿತು. 2008-09ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಯನ್ನು ಸಭೆಯು ಅನುಮೋದಿಸಿತು. ಇಲಾಖೆಯಿಂದ ಲೆಕ್ಕ ಪರಿಶೋಧನೆಯಾದ ನಂತರ 2007-08ನೇ ಸಾಲಿನಲ್ಲಿ ಸೊಸೈಟಿಯ ಪ್ರಾಥಮಿಕ ಸದಸ್ಯರಿಗೆ 10 ಶೇಕಡಾ ಲಾಭಾಂಶ ನೀಡುವರೆ ಹಾಗೂ ಸಿಬ್ಬಂದಿ ವರ್ಗಕ್ಕೆ 10 ಶೇಕಡಾ ಬೋನಸ್ ನೀಡುವರೆ ನಿರ್ದೇಶಕ ಮಂಡಳಿ ಮಾಡಿದ ಶಿಫಾರಸ್ಸನ್ನು ಸರ್ವಸದಸ್ಯರ ಸಭೆಯು ಅನುಮೋದಿಸಿತು.

ಸೊಸೈಟಿಯ ನಿರ್ದೇಶಕರಾದ ಶ್ರೀಯುತ ವೈ. ಮೋಹನ ರಾಯರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ವೇದಿಕೆಯಲ್ಲಿ ಉಪಾಧ್ಯಕ್ಷ ಸಿ. ಸರ್ವೋತ್ತಮ ರಾವ್ ಹಾಗೂ ನಿರ್ದೇಶಕರಾದ ಯು. ಪ್ರಫುಲ್ಲಚಂದ್ರರಾವ್, ವೈ.ಮೋಹನ ರಾವ್, ವೈ. ಮುರಲಿಕೃಷ್ಣ ರಾವ್, ವೈ. ಪ್ರಕಾಶಕುಮಾರ್, ಯು. ಅರವಿಂದ ಕುಮಾರ್, ಬಿ. ಕೃಷ್ಣಮೂರ್ತಿ ರಾವ್ ಹಾಗೂ ಗೀತಾ ಕೃಷ್ಣಕುಮಾರ್ ಉಪಸ್ಥಿತರಿದ್ದರು.